ಕಾಡಲು ಕಾರಣವಾದಂತಿದೆ. ಅವರ ಕತೆಗಳ ಭಾವಲೋಕಕ್ಕೆ ಪ್ರವೇಶದಂತಿರುವ ಈ ಸಂದರ್ಶನ ಶುರುವಾಗಿದ್ದು ಅವರ ಇತ್ತೀಚಿನ 'ಅನುಕ್ತ', 'ಮಾಲತಿ ಮಾತಾಡಿದಳು' ಕತೆಗಳ ಪ್ರಸ್ತಾಪದಿಂದ.

◆ 'ಮಾಲತಿ ಮಾತಾಡಿದಳು' ಕತೆಯ ಆ ಹೆಣ್ಣು ಮಗಳ ಅಸಹಾಯಕತೆಗೂ, ಅವಳು ಮಾತನಾಡಲೇ ಬೇಕಾಗಿದ್ದಕ್ಕೂ ಹರಿಗದ್ದೆಯ ಪ್ರಕೃತಿ, ಕೌಂಟುಂಬಿಕ ಮತ್ತು ಸಾಮಾಜಿಕ ಆವರಣವೇ ಕಾರಣ, ಅಲ್ಲವೇ? ಈ ಹಿನ್ನೆಲೆಯಲ್ಲಿ ನಿಮ್ಮ ಕತೆಗಳ ಭಾಷೆಯಲ್ಲಿ ಭೌತಿಕ ಮತ್ತು ಭಾವಪ್ರಪಂಚಗಳ ಹೆಣಿಗೆ ಹೇಗೆ ನೇಯ್ದುಕೊಂಡಿದೆ ಎಂದು ವಿವರಿಸುತ್ತೀರಾ?

ಒಳ್ಳೆಯ ಮನಸ್ಸು ಒಳ್ಳೆಯ ಭಾಷೆಯ ಸೃಷ್ಟಿಯಾಗಿದೆ ಎಂಬ ಹೇಳಿಕೆಯನ್ನು ಒಪ್ಪುವುದಾದರೆ ಕತೆಯೇ ಅಂತಹ ಭಾಷೆ ಎಂದು ನಂಬಿದವನು ನಾನು. ಏಕೆಂದರೆ, ನಾಗರಿಕ ಸಮಾಜದಲ್ಲಿ ಮನುಷ್ಯ ಚೈತನ್ಯ ಮುಟ್ಟಬಹುದಾದ ಎತ್ತರವನ್ನು ತಲುಪಲು ಕತೆ ಎಂಬ ಭಾಷೆಯ ಮೂಲಕ ಸಾಧ್ಯ. ಒಂದು ಜೀವಂತ ಪರಿಸರದ ಬಣ್ಣ, ಬೆಳಕು, ಪರಿಮಳ, ದನಿ ಮತ್ತು ರುಚಿ ಹಾಸುಹೊಕ್ಕಾಗಿರುವ ಭೂಗೋಲ ಮತ್ತು ಅಲ್ಲಿ ವಾಸವಾಗಿರುವ ಪಾತ್ರಗಳ ಭಾವಗಳ ನಾಟ್ಯ ಲೀಲೆ ಮೈತಳೆಯುವುದು ಕಥಾಭಾಷೆಯ ಆಕಾಶದಲ್ಲಿ. ಹಾಗಾಗಿ ನನಗೆ ಭೌತಿಕ ಪ್ರದೇಶದ ಸವಿವರಗಳ ಮೂಲಕವೇ ಅಲ್ಲಿ ಬದುಕುವ ವ್ಯಕ್ತಿಗಳ ಅಂತಃಕರಣದ ಕೋಲಾಹಲವನ್ನು ಕಂಡಿರಿಸುವ ದಾರಿ ಪ್ರಿಯವಾದದ್ದು. ಇಂಗ್ಲಿಷ್ ಲೇಖಕ ಡಿ.ಎಚ್. ಲಾರೆನ್ಸನ ಮಾತೊಂದು ಇಲ್ಲಿ ಉಲ್ಲೇಖನೀಯ: ಬದುಕು ಉರಿಯುವ ಪದಾರ್ಥ; ಅದರಿಂದ ಹೊರ ಹೊಮ್ಮುವ ಬೆಳಕು ಕಲೆ, ಸಾಹಿತ್ಯ, ಸಂಗೀತವಾಗುತ್ತದೆ. ಬೆಂಕಿ–ಬೆಳಕಿನ ರೂಪಕದ ಹಿನ್ನೆಲೆಯಲ್ಲಿ ನನ್ನ ಕಥಾಯಾತ್ರೆಯನ್ನು ಅರಿಯುವುದು ಸೂಕ್ತವಾದೀತು.

◆ ಈ ಯಾತ್ರೆ ಆರಂಭವಾಗುವುದು ಮತ್ತು ಈಗಲೂ ಮುಂದುವರಿದಿರುವುದು ನೀವು ತುಂಬ ಶ್ರದ್ಧೆಯಿಂದ, ಪ್ರೀತಿಯಿಂದ ನಿರ್ಮಿಸಿದ ಕತೆಗಳ ಜಗತ್ತಿನಲ್ಲಿ. ನಿಮ್ಮ ನಿರೂಪಕರೆಲ್ಲರೂ ಆ ಪ್ರದೇಶಕ್ಕೆ ಒಳಗಿನವರು ಮತ್ತು ಅದನ್ನು ಸಹಾನುಭೂತಿಯಿಂದ ಕಾಣಬಲ್ಲವರು. ಇದು ನಿಮ್ಮ ಊರಿನ ಪರಿಸರವೇ ಅಲ್ಲವೇ?

ನಾನು ಹುಟ್ಟಿ ಬೆಳೆದ ಪರಿಸರ ತಾನು ಕತೆಯಾಗುತ್ತೇನೆಂದು ಹಟ ಹಿಡಿದು ಕುಳಿತಂತಿತ್ತು; ಹಠಯೋಗದ ಕತೆಯ ನಿರೂಪಣೆಗೆ ನಿರೂಪಕನಾಗಿ ನಿಮಿತ್ತ ಮಾತ್ರವಾಗಿ ಸಿಕ್ಕಿದವನು ನಾನು. ನನ್ನೂರಿನ ಬಾಲ್ಯದ ಒಂಟಿ ಮನೆ ಕಾಡಿನ ಮಧ್ಯದಲ್ಲಿದೆ. ಈ ನಿಗೂಢ ಸಜೀವ ಕಾಡು ನನ್ನ ಕತೆಯಲ್ಲಿ ಭೌತ ವಾಸ್ತವವಾಗಿ ಮೂಡಿ ಬಂದಂತಯೇ ಅತೀಂದ್ರಿಯ ರೂಪಕವಾಗಿಯೂ ಹಾಜರಾಯಿತು. ಶಿಕಾರಿ, ಜೇನು ಹುಡುಕಾಟ, ದನ ಮೇಯಿಸುವುದು, ವನದೇವತೆಯ ಪೂಜೆ, ಮರಗಳ ಕಳ್ಳ ಸಾಗಾಣಿಕೆ, ಗಣಿಗಾರಿಕೆ, ಅಣೆಕಟ್ಟು ನಿರ್ಮಿಸುವುದು ಊರಿನ ವಿಸ್ತೃತ ದೈನಿಕ ರಾಜಕೀಯವೇ ಆಗಿದ್ದವು.

◆ ಯಾವುದನ್ನು ನಾವು 'ಅತೀಂದ್ರಿಯ' ಎನ್ನುತ್ತೇವೆಯೊ ಅದು ಆ ಜಗತ್ತಿನ ಪಾತ್ರಗಳಿಗೆ ತೀರ ಐಂದ್ರಿಯವಾದದ್ದು. 'ಶಕುನದ ಹಕ್ಕಿ' ಕತೆಯ ಚಂದ್ರಪ್ಪನಿಗೆ ಆ ಹಕ್ಕಿ ಶಕುನದ ಹಕ್ಕಿಯೇ. 'ಕೋದಂಡ'ದ ಮೂಕಾಂಬೆಗೆ ಹಾವಿನಷ್ಟೇ ಅದು ಹೊತ್ತ ಮಣಿಯೂ ನಿಜ. ಮತ್ತೆ ನಿಮ್ಮ ನಿರೂಪಕರು ಇವನ್ನೆಲ್ಲ ಸಹಾನುಭೂತಿಯಿಂದ ಕಾಣಬಲ್ಲರು ಎಂಬುದಕ್ಕಾಗೇ ಅವರು ಅಲ್ಲಿಗೆ ಒಳಗಿನವರು ಅನಿಸುವುದು. ನಿಮ್ಮೂರಿಗೆ ಹೊರಜಗತ್ತಿನ ಸಂಪರ್ಕ, ಸಂಬಂಧ ಇರಲಿಲ್ಲವೆ? ಅದು ಆಧುನಿಕ ರೀತಿಯ ಸಂಪರ್ಕವಲ್ಲ: ಜನಪದೀಯ ಎನ್ನಬಹುದಾದ ಸೇತುವೆ. ಕಾಡನ್ನು